**ಸುಬ್ಬ:** ಎರಡು ಕ್ಷುದ್ರಗ್ರಹ ಡಿಕ್ಕಿ ಸಂಭವಿಸುವುದು ಯಾವಾಗ?
**ಮಬ್ಬ:** ಮಾಜಿ ಪ್ರೇಯಸಿ ಹಾಗೂ ಹಾಲಿ ಹೆಂಡತಿ ಒಬ್ಬರಿಗೊಬ್ಬರು ಸಂಧಿಸಿದಾಗ.

**ಪೇಷೆಂಟ್:** ಡಾಕ್ಟೆ ನಂಗೆ ಊಟ ಆದ ಮೇಲೆ ಹಸಿವಾಗಲ್ಲ. ಮಲಗಿ ಎದ್ದ ಮೇಲೆ ನಿದ್ದೆ ಬರಲ್ಲ. ಏನು ಮಾಡೋದು?
**ಡಾಕ್ಟರ್:** ರಾತ್ರಿ ಎದ್ದು ಬಿಸಿಲಲ್ಲಿ ಕೂತ್ಕೊಳಿ ಸರಿಹೋಗುತ್ತೆ.

**ಟೀಚರ್:** ಯಾವ ಪಕ್ಷಿ ಹಾರುವುದಿಲ್ಲ?
**ಬಂಟಿ:** ಸತ್ತ ಪಕ್ಷಿ ಹಾರುವುದಿಲ್ಲ ಮಿಸ್.

ಹೆಂಡತಿ ಆಕಾಶದಲ್ಲಿ ಚಂದ್ರನನ್ನು ನೋಡುತ್ತಾ ಗಂಡನಿಗೆ ಹೀಗೆ ಕೇಳಿದಳು...
**ಹೆಂಡತಿ:** ರೀ... ನೀವು ದಿನಾಲೂ ನೋಡ್ತಿರಿ, ಆದ್ರೆ ಅದನ್ನು ಮುಚ್ಚಲು ಸಾಧ್ಯವಿಲ್ಲ, ಅದು ಯಾವುದು ಹೇಳಿ.
**ಗಂಡ:** ಇಲ್ಲ ನಾ ಹೇಳುವುದಿಲ್ಲ.
**ಹೆಂಡತಿ:** ಹೇಳಿ ಪ್ಲೀಸ್.
**ಗಂಡ:** ನನ್ನ ಬಿಟ್ಟು ಬಿಡು ನಾನು ಹೇಳಲ್ಲ.
**ಹೆಂಡತಿ:** ಹೇಳ್ತೀರೊ ಇಲ್ವೊ?
**ಗಂಡ:** ಅದು ನಿನ್ನ ಬಾಯಿ ಕಣೇ.

ಒಮ್ಮೆ ಕಲ್ಲೇಶಿ ಮತ್ತು ಮಲ್ಲೇಶಿ ಪುರಾತನ ವಸ್ತು ಸಂಗ್ರಹಾಲಯಕ್ಕೆ ಹೋಗಿದ್ದರು. ಅಲ್ಲಿದ್ದ ಈಜಿಪ್ಟಿನ ಮಮ್ಮಿಯನ್ನು ನೋಡಿ ಹೀಗಂದರು.
**ಕಲ್ಲೇಶಿ:** ಡೌಟೇ ಬೇಡ ಇದಕ್ಕೆ ಇಷ್ಟೊಂದು ಬ್ಯಾಂಡೇಜ್ ಸುತ್ತಿದ್ದಾರೆ ಅಂದ್ರೆ ಇದ್ಯಾವುದೋ ಭಯಂಕರ ಆಕ್ಸಿಡೆಂಟ್ ಕೇಸ್ ಆಗಿರುತ್ತೆ.
**ಮಲ್ಲೇಶಿ:** ನೀನು ಹೇಳಿದ್ದು ಸರಿ ಅನಿಸುತ್ತೆ. ಆಕ್ಸಿಡೆಂಟ್ ಮಾಡಿದ ಗಾಡಿ ನಂಬರ್ ಬಿ.ಸಿ 1760 ಅಂತ ಇಲ್ಲಿ ಬರೆದಿದ್ದಾರೆ ನೋಡು.


**ಮೇಷ್ಟ್ರು:** ನಿನ್ನ ಹೆಸರೇನು?
**ವಿದ್ಯಾರ್ಥಿ:** ಪಿರಿಯಾಪಟ್ಟಣದ ಶಾಮಣ್ಣನ ಮಗ ಚಿನ್ಮಯಮೂರ್ತಿ ಸರ್.
**ಮೇಷ್ಟ್ರು:** ಹೆಸರು ತುಂಬಾ ದೊಡ್ಡದಾಯ್ತು ಚಿಕ್ಕದಾಗಿ ಹೇಳು.
**ವಿದ್ಯಾರ್ಥಿ:** ಶಾರ್ಟ್ ಆಗಿ ಪಿಶಾಚಿ ಅಂತ ಕರೆಯಿರಿ ಸರ್.




ಒಂದು ಅಪಘಾತದಲ್ಲಿ ಗಂಡ ಹೆಂಡತಿ ಇಬ್ಬರು ತೀರಿಕೊಂಡು ದೆವ್ವಗಳಾದರು. ಬಹಳ ದಿನ ಕಳೆದ ಮೇಲೆ ಒಬ್ಬರಿಗೊಬ್ಬರು ಭೇಟಿಯಾದಾಗ.
**ಗಂಡ ದೆವ್ವ:** ಏನೇ ಎಷ್ಟು ದಿನಗಳ ನಂತರ ಸಿಕ್ಕಿದ್ದೀಯಾ. ಥೇಟ್ ದೆವ್ವದ ಹಾಗೇ ತಿರುಗಾಡುತ್ತಿದ್ದೀಯಾ?
**ಹೆಂಡತಿ ದೆವ್ವ:** ನೀವೂ ಅಷ್ಟೇ ಚೂರು ಬದಲಾಗಿಲ್ಲ. ಆಗ ಹೇಗೆ ಕೆಲಸ ಕಾರ್ಯ ಇಲ್ಲದೆ ತಿರುಗಾಡ್ತಿದ್ರೊ, ಈಗಲೂ ಹಾಗೆಯೇ ತಿರುಗಾಡ್ತಿದ್ದೀರಿ.

**ಮೇಷ್ಟ್ರು:** ಭೂಮಿಯ ಒಳಗಡೆ ಲಾವಾ ಇದ್ದರೆ ಭೂಮಿಯ ಹೊರಗಡೆ ಏನಿದೆ?
**ಚಿಂಟು:** ಹೊರಗಡೆ ವೊಪ್ಪೊ, ವಿವೊ, ಆ್ಯಪಲ್ ಇತ್ಯಾದಿ ಇವೆ ಸರ್.




**ಸರ್:** ಲೇ ಗುಂಡ ಜನನ ಮರಣ ಅಂದ್ರೆ ಏನು ಅಂತ ಸಿಂಪಲ್ಲಾಗಿ ಹೇಳು.
**ಗುಂಡ:** ಒಬ್ಬ ಎತ್ತಿಕೊಂಡ್ರೆ ಜನನ, ನಾಲ್ಕು ಜನ ಎತ್ತಿಕೊಂಡ್ರೆ ಮರಣ ಸರ್.

ಗುಂಡ ಸೆಕ್ಯುರಿಟಿ ಗಾರ್ಡ್ ಕೆಲಸಕ್ಕೆ ಸೇರಿದ ಮೊದಲ ದಿನವೇ ಕಂಠಪೂರ್ತಿ ಕುಡಿದು ಹಾಜರಾದ.
**ಮಾಲೀಕ:** ಯಾಕೋ ಕುಡಿದು ಬಂದಿದ್ದೀಯಾ?
**ಗುಂಡ:** ನೀವೆ ಹೇಳಿದ್ರಲ್ಲ ಸರ್, ಸೆಕ್ಯುರಿಟಿ ಫುಲ್ ಟೈಟಾಗಿರಬೇಕು ಅಂತ.

**ಹೆಂಡತಿ:** ರೀ... ಪಕ್ಕದ ಮನೆ ಮೀನಾ ನೋಡಿ ಅವಳ ಗಂಡನ ಜೊತೆಗೆ ವರ್ಷಕ್ಕೆ ಹತ್ತು ದಿನ ಆದ್ರೂ ಟೂರ್ ಹೋಗ್ತಾಳೆ. ನೀವು ಯಾವತ್ತಾದ್ರೂ ಎಲ್ಲಿಗಾದ್ರೂ ಕರೆದುಕೊಂಡು ಹೋಗಿದ್ದೀರಾ?
**ಗಂಡ:** ಸುಮಾರು ಸಲ ಕೇಳಿದ್ದೆ ಕಣೇ ಕರ್ಕೊಂಡು ಹೋಗಲು ಅವಳು ಒಪ್ಪಲಿಲ್ಲ.

**ಹೆಂಡತಿ:** ರೀ... ನಾನು ಐಫೋನ್ 17 ತಗೋಳ್ಲಾ?
**ಗಂಡ:** ಬೇಡ, ನೀನು ಯಾರ ಜೊತೆ ಮಾತಾಡ್ಬೇಕೋ ಅವರ ಮನೆಗೆ ಆಟೊದಲ್ಲಿ ಹೋಗಿ ಮಾತಾಡಿ ಬಾ. ಅದೆಷ್ಟು ಖರ್ಚಾಗುತ್ತೋ ಅದನ್ನು ನಾನು ಕೊಡ್ತೀನಿ. ಐಫೋನ್‌ಗಿಂತಲೂ ಇದೇ ಅಗ್ಗ.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**